**ಸಾಕ್ಷಿಯನ್ನು ದಿಃ02.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃಪ್ರತಿವಾದಿ ಪರ ವಕೀಲರಿಂದಃ**

1. ದಿಃ 08.11.2010 ರಂದು ಆದ ಯಾವುದಾದರೂ ಪತ್ರಕ್ಕೆ ಸಹಿ ಮಾಡಿದ್ದೀರಾ ಎಂದರೆ, ಮಾಡಿದ್ದೇನೆ. ಮಹಾಲಿಂಗಪ್ಪ ಜಮೀನು ಕೊಡುತ್ತೇನೆ ಎಂದು ಹಾಗೂ ಹರೀಶಪ್ಪ ಜಮೀನು ಖರೀದಿಸುತ್ತೇನೆ ಎಂದು ನನ್ನನ್ನು ಕರೆದುಕೊಂಡು ಹೋಗಿ ಸಹಿ ಮಾಡಿಸಿರುತ್ತಾರೆ. 2010 ರಲ್ಲಿ ನಾನು ಸಹಿ ಮಾಡಿದ್ದು, ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ.

2. ಸದರಿ ಪತ್ರ ಸ.ನಂ.30/106 ರಲ್ಲಿ 3 ಎಕರೆಗೆ ಸಂಬಂಧಪಟ್ಟಿದ್ದು.

3. ನನ್ನ ಜೊತೆ ಸದರಿ ಪತ್ರಕ್ಕೆ ಸುರೇಶ ಮತ್ತು ಮಂಜುನಾಥ ರವರು ರವರು ಸಹಿ ಮಾಡಿದ್ದಾರೆ.

4. ಸದರಿ ಕರಾರು ಪತ್ರ 1 ಲಕ್ಷ 25 ಸಾವಿರಕ್ಕೆ ಸಂಬಂಧಪಟ್ಟಿತ್ತು. ಸದರಿ ಹಣವನ್ನು ಯಾರು ಕೊಟ್ಟರು ಎಂದರೆ, ನನ್ನ ಮುಂದೆ ಮಾತುಕತೆಯಾಗಿ ಮಹಾಲಿಂಗಪ್ಪ ನವರು ಹರೀಶ ರವರ ಬಳಿ 50 ಸಾವಿರ ಪಡೆದಿದ್ದರು.

5. ಸಾಕ್ಷಿ ನಿಪಿ-13 ರ ಹಣ ಸಂದ ರಶೀದಿಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ - 13(ಎ) ಎಂದು ಗುರುತಿಸಲಾಯಿತು.

6. ನಿಪಿ-13 ರ ಪೇಪರ್ ಯಾರು ತಂದಿದ್ದರು ಎಂದರೆ, ನೆನಪಿಲ್ಲ, ಮಹಾಲಿಂಗಪ್ಪ ತಂದಿರಬಹುದು. ಸದರಿ ಪೇಪರನ್ನು ದಿಃ 08.11.2010 ರಂದು ತಂದಿದ್ದರಾ ಎಂದರೆ ಹೌದು.

7. ನಿಪಿ -13 ರಲ್ಲಿ ಏನಿದೆ , ಯಾರು ತಂದಿದ್ದರಾ ಹಾಗೂ ಯಾವಾ ದಿನಾಂಕ ತಂದಿದ್ದಾರೆ ಎಂದು ನೋಡಿಕೊಂಡು ಸಹಿ ಮಾಡಿದ್ದೀರಾ ಎಂದರೆ, ಅದನ್ನೆಲ್ಲ ನಾನು ಕೇಳಿಲ್ಲ.

8. ನಿಪಿ - 13 ರಲ್ಲಿ ದಿಃ 27.01.2011 ರಂದು ತಂದಿರುವ ಪೇಪರ್ ಎಂದರೆ, ಹೌದು. ಸದರಿ ಪೇಪರ್ ಜಗದೀಶ್ ಕುಮಾರ್ ವಕೀಲರ ಹೆಸರಿನಲ್ಲಿದೆ ಎಂದರೆ ಸರಿ.

9. ನಾನು ಒಕ್ಕಲಿಗ ಸಮುದಾಯಕ್ಕೆ ಸೇರಿದವನು. ಹರೀಶಪ್ಪ ಲಿಂಗಾಯತ ಸಮುದಾಯಕ್ಕೆ ಸೇರಿದವರು.

10. ನೀವು ಹಾಗೂ ಹರೀಶಪ್ಪ ನವರು ಸ್ನೇಹಿತರು ಎಂದರೆ ಸರಿ.

11. ದಿಃ 08.11.2010 ರಂದು ಸಹಿ ಹಾಕಿರುವುದು ಸುಳ್ಳು ಎಂದರೆ ಸರಿಯಲ್ಲ. ಹರೀಶಪ್ಪ ನವರು ನಿಮ್ಮ ಸ್ನೇಹಿತರಾದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

12. ನಿಪಿ - 13 ಕ್ಕೆ ಹಾಗೂ ಮಹಾಲಿಂಗಪ್ಪನವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನೀವು ಹೇಳುವಂತೆ ಮಹಾಲಿಂಗಪ್ಪನವರು ಯಾವುದೇ ಹಣ ಪಡೆದಿಲ್ಲ ಹಾಗೂ ಯಾವುದೇ ವ್ಯವಹಾರ ಆಗಿಲ್ಲದಿದ್ದರೂ ಹರೀಶರವರ ಪರ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

13. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಸತ್ಯವಾಗಿವೆ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

14. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮಹಾಲಿಂಗಪ್ಪನವರು ಯಾವುದೇ ಪತ್ರ ಮಾಡಿಲ್ಲ ಎಂದರೆ ಸರಿಯಲ್ಲ.

15. ದಾವಾ ಆಸ್ತಿ ದರಖಾಸ್ತು ಜಮೀನಾಗಿದ್ದು, ಅವರಿಗೆ ಸದರಿ ಜಮೀನು ವಿಚಾರವಾಗಿ ಯಾವುದೇ ವ್ಯವಹಾರ ಮಾಡಲು ಅಧಿಕಾರ ಇಲ್ಲ ಎಂದರೆ, ಕರಾರು ಪತ್ರಕ್ಕೆ ಸಹಿ ಹಾಕಿರುವುದು ಬಿಟ್ಟರೇ ಬೇರೆ ವಿಚಾರ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ